**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ನಾಗರಾಜು@ನಾಗಾ** | ಪ್ರಾಸಾಃ 2 |
| ತಂದೆಯ/ಗಂಡನ ಹೆಸರು | | ಪುಟ್ಟಬಸವೇಗೌಡ | ಚಾಸಾಃ 2 |
| ವಯಸ್ಸು | | 35 ವರ್ಷ | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಹನಿಯಂಬಳ್ಳಿ | ದಿಃ 30/07/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿತರು ಗೊತ್ತು. ಚಾಸಾ-1 ನನ್ನ ಊರಿನವರು, ಚಾಸಾ 3 ಮೃತಪಟ್ಟಿದ್ದಾರೆ. ಚಾಸಾ 4 ರಿಂದ 6 ಗೊತ್ತು. ದಿಃ16.06.2015 ರಂದು ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಹನಿಯಂಬಳ್ಳಿ ಗ್ರಾಮದ ಚಾಸಾ 1 ರವರ ನಿವೇಶನದ ಬಳಿ 1ನೇ ಆರೋಪಿಯು ಚಾಸಾ 1 ರವರ ಅಂಗಿ ಪಟ್ಟಿ ಹಿಡಿದು ತಳ್ಳಾಡುತ್ತಾ ಇಬ್ಬರು ಬಿದ್ದಿದ್ದರು. ಇಬ್ಬರು ಬೈದಾಡಿಕೊಳ್ಳುತ್ತಿದ್ದರು. ನಾನು ಮತ್ತು ಚಾಸಾ 5 ರವರು ಜಗಳ ಬಿಡಿಸಿರುತ್ತೇವೆ. ದಿಃ18.06.2015 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 3ರವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ರವರೆಗೆ ಮಹಜರ್ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ರುಜು ಮಾಡಿದ್ದೇನೆ. ಸಾಕ್ಷಿಯು ನಿಪಿ-2 ಸ್ಥಳಪಂಚನಾಮೆಯಲ್ಲಿನ ತನ್ನ ರುಜುವನ್ನು ನೋಡಿ ಗುರುತಿಸಿದ್ದರಿಂದಾಗಿ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರಾಜ್ಞ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 1 ರವರು ಆರೋಪಿತರಿಗೆ ತನ್ನ ನಿವೇಶನಕ್ಕೆ ಕೊಳಚೆ ನೀರನ್ನು ಬಿಡುವ ವಿಚಾರದಲ್ಲಿ ಪ್ರಶ್ನಿಸಿದ್ದಕ್ಕೆ ಗಲಾಟೆ ಆಗಿರುತ್ತದೆ ಎಂದರೆ ಸರಿ. 1 ನೇ ಆರೋಪಿಯು ಚಾಸಾ 1 ರವರನ್ನು ಹಿಡಿದುಕೊಂಡು ಮೈಕೈಗೆ ಹೊಡೆದು ಗಾಯಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಗಳ ಬಿಡಿಸಲು ಚಾಸಾ 4 ರವರು ಬಂದಾಗ 2 ರಿಂದ 4 ನೇ ಆರೋಪಿತರು ಅವರನ್ನು ಹಿಡಿದು ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಜಗಳ

ಬಿಡಿಸುವಾಗ ನನಗೂ ಕೂಡ ಪೆಟ್ಟಾಯಿತು ಎಂದರೆ ಸರಿ. ಗಲಾಟೆ ಆದ ನಂತರ 1 ನೇ ಆರೋಪಿಯು ನಾನು ಮತ್ತು ಚಾಸಾ 5 ಗಲಾಟೆ ಬಿಡಿಸಿದ್ದಕ್ಕೆ ನೀನು ಬದುಕಿಕೊಂಡಿದ್ದಿಯಾ ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುತ್ತಿದ್ದೇವು ಎಂದು ಚಾಸಾ 1 ರವರಿಗೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ಚಾಸಾ 6 ರವರು ಬಂದು ಚಾಸಾ 1 ಮತ್ತು 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ.

**<u>ಪಾಟೀ ಸವಾಲು:</u>** ಆರೋಪಿತರ ಪರ ವಕೀಲರಿಂದಃ

ಚಾಸಾ 1 ನನಗೆ ಸಂಬಂಧಿ ಎಂದರೆ ಸರಿಯಲ್ಲ. ಚಾಸಾ 1 ನನಗೆ ಸಂಬಂಧಿಯಾಗಿದ್ದರೂ ಕೂಡ ಸಂಬಂಧಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿತರ ನಡುವೆ ಸಿವಿಲ್ ವಾಜ್ಯ ಇದೆ ಎಂದರೆ ನನಗೆ ಗೊತ್ತಿಲ್ಲ. ಗಲಾಟೆ ಆಗುವಾಗ ನಾನು 100 ಮೀ ದೂರದಲ್ಲಿದ್ದು ಗಲಾಟೆ ಶಬ್ದ ಕೇಳಿ ಓಡಿ ಬಂದಿರುತ್ತೇನೆ. ಪೊಲೀಸರಿಗೆ ಹೇಳಿಕೆ ನೀಡುವಾಗ ನನಗೆ ಏಟಾಗಿತ್ತು ಎಂದು ಹೇಳಿಲ್ಲ. ಗಲಾಟೆಯಲ್ಲಿ ಯಾರು ಯಾರಿಗೆ ಹೊಡೆಯುತ್ತಿದ್ದರು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಮಹಜರ್ ಅನ್ನು ನಾನು ಓದಿ ತಿಳಿದಿಲ್ಲ ಮತ್ತು ಅದರಲ್ಲಿ ಬರೆದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಚಾಸಾ 1 ರವರಿಗೆ ಏನೆಂದು ಬೈದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬೈದಾಡಿಕೊಳ್ಳುತ್ತಿದ್ದರು ಆದರೆ ಏನೆಂದು ಕೇಳಿಸಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**